ಪ್ರಶ್ನಿಸಿದ್ದಳು.

'ಏನ್ ಗೊತ್ತಾ? ನೀವು ಹೆಂಗಸರೆಲ್ಲ ಒಂದೇ. ನಿಮ್ಮ ತಪ್ಪು, ನಿಮ್ಮ ನಡತೆ, ನಿಮ್ಮ ವೈಯಕ್ತಿಕ ವಿಷಯದ ಬಗ್ಗೆ ಯಾರೂ ಮಾತಾಡಬಾರದು. ಆದರೆ ನೀವು ಮಾತ್ರ ಗಂಡಸರ ಬಗ್ಗೆ ಷರಾ ಬರೀಬಹುದು. ನೀವು ಪ್ರಶ್ನಿಸಿದರೆ, ಬಳಸಿಕೊಂಡು ಬಿಸಾಡಿದರೆ ಸ್ತ್ರೀ ಸ್ವಾತಂತ್ರ್ಯ, ಮಹಿಳಾ ಕೇಂದ್ರಿತ ಚಿಂತನೆ. ನಾವು ಮಾತಾಡಿದ್ರೆ ಪುರುಷಾಹಂಕಾರ, ಗೊಡ್ಡು ಮನಃಸ್ಥಿತಿ, ಚೀಪ್ ಬಿಹೇವಿಯರ್ ಅಲ್ವಾ?' ಕ್ಷಣದ ಹಿಂದಿನ ಉದ್ವೇಗ ಈಗ ಕೋಪವಾಗಿ ಕಣ್ಣು ಕೆಂಪಾಗುತ್ತಿತ್ತು.

'ಆದರೆ ನಾವಿಲ್ಲಿ ಇಡೀ ಹೆಣ್ಣುಕುಲ ಅಥವಾ ಪುರುಷ ಕುಲದ ಬಗ್ಗೆ ಚರ್ಚೆ ಮಾಡ್ತಿಲ್ಲ. ನೀವು ನಿಮ್ಮ ಬಗ್ಗೆ ಹೇಳುವುದಾದರೆ ಹೇಳಿ. ಅಷ್ಟಕ್ಕೂ ಭಾನುವಾರದ ಒಳ್ಳೆ ನಿದ್ದೆಯನ್ನು ತ್ಯಾಗ ಮಾಡಿ ಇಲ್ಲಿಗೆ ಬಂದು ನಿಮ್ಮ ಭಾಷಣ ಕೇಳುವ, ನಿಮ್ಮಿಂದ ಛೀ ಥೂ ಅನ್ನಿಸಿಕೊಳ್ಳುವ ದರ್ದು ನಂಗಿಲ್ಲ. ಐ ಹ್ಯಾವ್ ಬೆಟರ್ ವರ್ಕ್ ಟು ಡು'. ಶಮಿತಾ ನೀರಿನ ಲೋಟವೆತ್ತಿ ಗಟಗಟ ಕುಡಿದು ಕುಕ್ಕಿದ ಶಬ್ದಕ್ಕೆ ಪಕ್ಕದ ಟೇಬಲ್ಲಿನವರೂ ಒಮ್ಮೆ ತಿರುಗಿ ನೋಡಿದ್ದರು. ತುಂಬ ಹೊತ್ತಿನ ನೀರವ ಮೌನದ ನಂತರ ಪ್ರಮಥನಾಥ ಮಾತನಾಡಿದ್ದ.



'ಸ್ಸಾರಿ... ಇದು ಈ ಮೂರು ದಿನಗಳ ಕಥೆ ಮಾತ್ರವಲ್ಲ ಶಮೀ.. ನಾನು ಕಳೆದ ಇಪ್ಪತ್ತು ವರ್ಷಗಳಿಂದ ಅನುಭವಿಸುತ್ತಾ ಬಂದಿರುವ ಬದುಕು. ನನ್ನ ಹೆಂಡತಿ ವಿನುತಾ ಮದುವೆಗೆ ಮುಂಚೆ ಒಬ್ಬಾತನನ್ನು ಪ್ರೇಮಿಸಿದ್ದಳು. ಜಾತಿ ಬೇರೆ ಅಂತ ತುರ್ತಾಗಿ ನನ್ನ ಹುಡುಕಿ ಖೆಡ್ಡಾಗೆ ಬೀಳಿಸಿ ಗಂಟುಕಟ್ಟಿದರು. ವಿಷಯ ತಿಳಿದು ಅವಳಿಂದ ಐದು ವರ್ಷ ದೂರವಿದ್ದೆ. ಅತ್ತು ಕರೆದು ಹತ್ತಿರಾದಳು. ಮಗಳು ಹುಟ್ಟಿದಳು. ಆಮೇಲೆ ನಮ್ಮ ಮಧ್ಯೆ ಪ್ರೀತಿ, ಪ್ರೇಮವಿರಲಿ ಕನಿಷ್ಠ ಸ್ನೇಹವೂ ಚಿಗುರಲಿಲ್ಲ. ನನ್ನ ಹೆಂಡತಿಗೆ ತಿಂಗಳಾದರೆ ಎರಡು ಲಕ್ಷ ಸಂಬಳ ಬರುವ ಕೆಲಸವಿದೆ. ನಾನು ಐವತ್ತು ಸಾವಿರಕ್ಕೆ ಮನೆಯಿಂದ ಮೂರು ಬಸ್ ಚೇಂಜ್ ಮಾಡಿ ಇಲ್ಲಿಗೆ ಬರ್ತೀನಿ. ಮಗಳು ರೆಸಿಡೆನ್ಷಿಯಲ್ ಸ್ಕೂಲಲ್ಲಿ ಓದ್ತಿದ್ದಾಳೆ. ಮನೆಗೆ ಹೋದರೆ ದೆವ್ವದ ಗುಹೆ ಹೊಕ್ಕಂತೆ ಇರತ್ತೆ. ನಮ್ಮಿಬ್ಬರ ಮಧ್ಯೆ ಮಾತಿಲ್ಲ. ಪ್ರತಿ ಮಾತುಕತೆಯೂ ಜಗಳದಲ್ಲೇ ಅಂತ್ಯವಾಗೋದು. ನನಗೂ ಪ್ರೀತಿ, ಪ್ರೇಮ, ವಿಶ್ವಾಸ, ಒಳ್ಳೆಯ ಕುಟುಂಬದ ವಾತಾವರಣ ಬೇಕು ಅನ್ನಿಸೋದು ತಪ್ಪಾ? ಒಬ್ಬ ಮನುಷ್ಯ ಎಷ್ಟು ಕಷ್ಟ ನೋಡಬಹುದು ಶಮೀ..' ಅವನ ಕಣ್ಣಲ್ಲಿ ನೀರಾಡುತ್ತಿತ್ತು. ಹೊಟ್ಟೆ ಚುರುಗುಟ್ಟುವ ಹೊತ್ತಲ್ಲಿ ಕಣ್ಮುಂದೆ ಊಟದ ತಟ್ಟೆಯಿತ್ತು. ಮಾತಿಗೇನು? ಯಾವತ್ತಿಗೂ ಇದ್ದಿದ್ದೆ ಎಂಬ ನಿರಾಳಭಾವದಲ್ಲಿ,'ಅರ್ಥವಾಗತ್ತೆ. ಆದರೆ ಮೊದಲು ಊಟ ಮುಗಿಸಿ ಬಿಡೋಣ. ಈ ಮಾತುಕತೆ ಆಮೇಲೆ ಇಟ್ಕೊಳ್ಳೋಣ್ವಾ?' ಎನ್ನುತ್ತಾ ಶಮೀ ಆಗಲೇ ತಣ್ಣಗಾಗತೊಡಗಿದ್ದ ರೋಟಿ ಮುರಿಯಲು ಪ್ರಾರಂಭಿಸಿದಳು.

ಅವನು ಜ್ವರದಂತೆ ಕಾಡಿಸುತ್ತಿದ್ದ ಯೋಚನೆಗಳ ಕಾವಿನಲ್ಲಿ ಅದೇನು ತಿಂದನೋ, ರುಚಿ ಹೇಗಿತ್ತೋ, ತಣ್ಣೀರೋ ಬಿಸಿನೀರೋ ತಿಳಿಯದೆ ವಿಧೇಯವಾಗಿ ತಟ್ಟೆ ಬಳಿದಂತೆ ತಿಂದು ಎದ್ದ.

'ನನ್ನ ಊಟಕ್ಕೆ ನಾನೇ ಪೇ ಮಾಡ್ತೀನಿ' ಎಂದಿದ್ದು ಅವಳ ಸ್ವಾಭಿಮಾನವೋ, ಸೊಕ್ಕೋ ಎಂಬ ಗೊಂದಲದಲ್ಲೇ ಹತ್ತಿರದ ಪಾರ್ಕಿನ ಕಲ್ಲುಬೆಂಚಿನ ಮೇಲೆ ಕುಳಿತಿದ್ದ ಪ್ರಮಥನಾಥನನ್ನು ಶಮಿತಾಳೇ ಮಾತಿಗೆಳೆದಳು.

'ಅಂದರೆ ಈಗ ಮನೆಯಲ್ಲಿ ಇಲ್ಲದ ಶಾಂತಿ, ನೆಮ್ಮದಿ, ಪ್ರೀತಿಯನ್ನು ಹೊರಗಡೆ ಹುಡುಕುವ ಪ್ರಯತ್ನದಲ್ಲಿದ್ದೀರಿ. ಮೊನ್ನೆ ಐ ಲವ್ ಯೂ ಅಂದಿದ್ದು ಕೂಡ ಅದೇ ಪ್ರಯತ್ನದ ಭಾಗ ಅಲ್ವಾ ಸರ್?' ಧ್ವನಿಯಲ್ಲಿ ಶಾಂತ ಗಂಭೀರ ಗತ್ತು ತುಳುಕುತ್ತಿತ್ತು.

'ಇಲ್ಲ.. ನೀನಂದ್ರೆ ನನಗೆ ನಿಜಕ್ಕೂ ಬಹಳ ಬಹಳ ಇಷ್ಟ. ಇಷ್ಟ ಮಾತ್ರ ಅಲ್ಲ ಪ್ರೀತಿಯೂ ಇದೆ. ಎಷ್ಟು ಸಲ ನಿನ್ನ ಕಣ್ಣು, ನಿನ್ನ ಮಾತು, ನಡೆನುಡಿ, ಡ್ರೆಸ್ಸಿಂಗ್ ಸೆನ್ಸ್ ಎಲ್ಲದರ ಬಗ್ಗೆ ಮೆಚ್ಚಿ ಮಾತಾಡಿಲ್ಲ ಹೇಳು... ತುಂಬಾ ಪ್ರಾಮಾಣಿಕವಾಗಿ ಪ್ರೀತಿಸ್ತಿದ್ದೀನಿ ಶಮೀ...' ಅವನು ತಬ್ಬಿಬ್ಬಾದರೂ ಸಾವರಿಸಿಕೊಂಡು ಹೇಳುತ್ತಿದ್ದ.